ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 11-02-1971.

***<u>ಅಂತಃವಾಹಕ ಶರೀರದ ಮೂಲಕ ಸೇವೆ</u>*** (अंत:वाहक शरीर द्वारा सेवा)

ಒಂದು ಕ್ಷಣದಲ್ಲಿ ಎಷ್ಟು ದೂರ ಹೋಗಬಲ್ಲಿರಿ ಎಂದು ಲೆಕ್ಕ ಮಾಡಬಲ್ಲಿರಾ? ಸತ್ತ ಮೇಲೆ ಆತ್ಮ ಒಂದು ಕ್ಷಣದಲ್ಲಿ ಎಲ್ಲಿಗೋ ಹೋಗಿ ತಲುಪುತ್ತದೆ. ಅಂತಃವಾಹಕ ಶರೀರದ ಅರ್ಥವೇನಾಗಿದೆ? ಅಂತಃವಾಹಕ ಶರೀರದಿಂದ ಬಹಳ ಸುತ್ತಾಡುತ್ತಿದ್ದರು ಎಂಬ ತಮ್ಮ ಗಾಯನವೆನಿದೆಯಲ್ಲ, ಅದರ ಅರ್ಥವೇನು? ಈ ಗಾಯನ ಕೇವಲ ದಿವ್ಯದೃಷ್ಟಿಯವರದಲ್ಲ ಆದರೆ ತಮ್ಮೆಲ್ಲರದಾಗಿದೆ. ಜನರು ತಮಗೆ ತಿಳಿದಂತೆ ಅಂತಃವಾಹಕ ಶರೀರದ ಅರ್ಥವನ್ನು ಹೇಳುತ್ತಾರೆ. ಆದರೆ ಯಥಾರ್ಥ ಅರ್ಥವಾಗಿದೆ-ಅಂತ್ಯದ ಸಮಯದಲ್ಲಿ ತಮ್ಮ ಕರ್ಮಾತೀತ ಸ್ಥಿತಿ ಇರುತ್ತದೆ. ಮತ್ತು ಅದು ನಿಮ್ಮ ವಾಹನವಾಗುತ್ತದೆ. ಯಾವುದಾದರೂ ವಾಹನದಿಂದ ಸುತ್ತಾಡಲಾಗುತ್ತದೆ. ಈ ಸ್ಥಿತಿಯಿಂದ ನೀವು ಎಲ್ಲಿಯಾದರೂ ತಲುಪುತ್ತೀರಿ, ಆದ್ದರಿಂದ ಅಂತಃವಾಹಕ ಶರೀರವೆಂದು ಕರೆಯುತ್ತಾರೆ. ವಾಸ್ತವಿಕವಾಗಿ ಇದು ಅಂತಿಮ ಸ್ಥಿತಿಯ ಗಾಯನವಾಗಿದೆ. ಆ ಸಮಯದಲ್ಲಿ ತಾವು ಈ ಸ್ಥೂಲ ಸ್ವರೂಪದ ಭಾವನೆಯಿಂದ ಭಿನ್ನವಾಗಿರುತ್ತೀರಿ. ಆದ್ದರಿಂದ ಇದನ್ನು ಸೂಕ್ಷ್ಮಶರೀರವೆಂದು ಹೇಳಿದ್ದಾರೆ. ಹಾರುವ ಕುದುರೆ ಎಂದು ಹೇಳಿಕೆಯಿದೆ. ಅದು ತಮ್ಮೆಲ್ಲರ ಈ ಸಮಯದ ಅನುಭವದ ಮಾತುಗಳನ್ನು ಕಥೆಗಳ ರೂಪದಲ್ಲಿ ಬರೆಯಲಾಗಿದೆ. ಒಂದು ಕ್ಷಣದಲ್ಲಿ ಇಲ್ಲಿ ತಲುಪು ಎಂದು ಆದೇಶ ಕೊಟ್ಟಾಗ ಅಲ್ಲಿ ತಲುಪುವುದು. ಈ ರೀತಿ ತಮ್ಮ ಅನುಭವ ಮಾಡುತ್ತಿರುತ್ತೀರಾ? ಇತ್ತೀಚೆಗೆ ವಿಜ್ಞಾನವೂ ಗತಿ(ವೇಗ)ಯನ್ನು ತೀವ್ರಗೊಳಿಸಲು ತೊಡಗಿದೆ. ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಸಮಯದಲ್ಲಿ ಹೆಚ್ಚು ಸಫಲತೆಯ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿ ಎಲ್ಲಾ ಸಮಯದಲ್ಲಿ ಗತಿಯನ್ನು ಹೆಚ್ಚಿಸುವ ತಮ್ಮ ಪುರುಷಾರ್ಥ ನಡೆಯುತ್ತಿದೆ. ಎಷ್ಟೆಷ್ಟು ಯಾವುದರ ಗತಿ ಹೆಚ್ಚುತ್ತದೆಯೋ ಅಷ್ಟು ತಮ್ಮ ಅಂತಿಮ ಸ್ಥಿತಿಗೆ ಸಮೀಪ ಬರುವಿರಿ. ತೀವ್ರಗತಿಯಿಂದ ಸ್ಥಿತಿಗೆ ತಲುಪುವಿರಿ. ತಮ್ಮ ಗತಿಯಿಂದ ಸ್ಥಿತಿಯನ್ನು ಗುರುತಿಸಬಹುದು.

ಈಗ ಎಲ್ಲರೂ ಮಹಾನ್ ಶಿವರಾತ್ರಿ ಪರ್ವವನ್ನು ಆಚರಣೆ ಮಾಡುವ ಯೋಜನೆ ಮಾಡುತ್ತಿರುವಿರಿ. ಯಾವ ಹೊಸತನವನ್ನು ಯೋಚಿಸಿದ್ದೀರಿ? (ಧ್ವಜವನ್ನು ಹಾರಿಸುವುದು). ತಮ್ಮ ತಮ್ಮ ಸೇವಾಕೇಂದ್ರಗಳಲ್ಲಿ ಧ್ವಜವನ್ನು ಹಾರಿಸಿ ಆದರೆ ಪ್ರತಿಯೊಂದು ಆತ್ಮನ ಹೃದಯದಲ್ಲಿ ತಂದೆಯ ಪ್ರತ್ಯಕ್ಷತೆಯ ಧ್ವಜವನ್ನು ಹಾರಿಸಿ. ಅದು ಹೇಗೆ ಸಾಧ್ಯ ಶಕ್ತಿ-ಸ್ವರೂಪದ ಪ್ರತ್ಯಕ್ಷತೆಯಾದಾಗ. ಶಕ್ತಿ-ಸ್ವರೂಪದಿಂದಲೇ ಸರ್ವ ಶಕ್ತಿವಂತನನ್ನು ಪ್ರತ್ಯಕ್ಷ ಮಾಡಬಹುದು. ಶಕ್ತಿ- ಸ್ವರೂಪ ಎಂದರೆ ಸಂಹಾರಿ ಮತ್ತು ಅಲಂಕಾರಿ. ಸ್ಟೇಜ್ ಮೇಲೆ ಬರುವಾಗ ಮೊದಲು ತಮ್ಮ ಸ್ಥಿತಿಯ ಸ್ಟೇಜ್ ಚೆನ್ನಾಗಿ ಸರಿಪಡಿಸಿಕೊಂಡು ಬನ್ನಿ ಆಗ ಜನರಿಗೆ ತಮ್ಮ ಆಂತರಿಕ ಸ್ಥಿತಿ (ಸ್ಟೇಜ್)ಯ ಸಾಕ್ಷಾತ್ಕಾರವಾಗುವುದು. ಬೇರೆ ತಯಾರಿಗಳನ್ನು ಹೇಗೆ ಮಾಡುತ್ತೀರೋ ಹಾಗೆಯೇ ಅಲಂಕಾರಿಯಾಗಿ ಸ್ಟೇಜ್ ಮೇಲೆ ಬರುತ್ತಿದ್ದೇನೆ ಎಂದು ತಮ್ಮ ಈ ತಯಾರಿಯನ್ನೂ ನೋಡಿಕೊಳ್ಳಿ. (ಪ್ರಕಾಶ ಮತ್ತು ಬೆಳಕಿನ ಮನೆ) ಲೈಟ್ ಹೌಸ್, ಮೈಟ್ ಹೌಸ್ – ಎರಡೂ ಸ್ವರೂಪ ಪ್ರತ್ಯಕ್ಷ ರೂಪದಲ್ಲಿರಲಿ. ಎರಡೂ ಸ್ವರೂಪಗಳಿದ್ದಾಗ ಸರಿಯಾದ ರೀತಿಯಲ್ಲಿ ಮಾರ್ಗದರ್ಶಕರಾಗಬಹುದು. ತಮ್ಮ "ತಂದೆ" ಎಂಬ ಶಬ್ದ ಜ್ಞಾನ-ಅಂಜನದ ಕಾರ್ಯ ಮಾಡಲಿ, ಅನಾಥರನ್ನು ಸನಾಥರನ್ನು ಮಾಡುವಷ್ಟು ಸ್ನೇಹ ಮತ್ತು ಶಕ್ತಿ ಅದರಲ್ಲಿ ತುಂಬಿರಲಿ. ಈ ಒಂದು ಶಬ್ದದಲ್ಲಿ ಅಷ್ಟೊಂದು ಶಕ್ತಿಯನ್ನು ತುಂಬಿ ಸ್ಥಿತಿಯಲ್ಲಿ ದಯೆ ಮತ್ತು ಕಲ್ಯಾಣದ ಭಾವನೆ, ಅತಿ ಸ್ನೇಹದ ಶಬ್ದ ಮತ್ತು ಸ್ವರೂಪದಲ್ಲಿ ಶಕ್ತಿಯ ಕಾಂತಿ ತಾವು ಸ್ಟೇಜ್ ಮೇಲೆ ಬರುವ ಸಮಯದಲ್ಲಿರಲಿ. ತಮ್ಮ ಬಹುಕಾಲದಿಂದ ಮೊರೆಯಿಡುವ ಭಕ್ತರಿಗೆ ತಮ್ಮಿಂದ ತಂದೆಯ ಸಾಕ್ಷಾತ್ಕಾರ ಮಾಡಿಸಲು ಬಂದಿದ್ದೇನೆ ಎಂದು ತಿಳಿದು ತಮ್ಮ ಸ್ಮೃತಿ ಮತ್ತು ಸ್ಥಿತಿಯನ್ನು ಶಕ್ತಿಶಾಲಿ ಮಾಡಿಕೊಳ್ಳಿ. ಈ ರೀತಿ ತಮ್ಮ ಆತ್ಮಿಕ ರೂಪ, ಆತ್ಮಿಕ ದೃಷ್ಟಿ, ಕಲ್ಯಾಣಕಾರಿ ವೃತ್ತಿಯಿಂದ ತಂದೆಯನ್ನು ಪ್ರತ್ಯಕ್ಷ ಮಾಡಬಹುದು. ಏನು ಮಾಡಬೇಕೆಂದು ತಿಳಿಯಿತೇ? ಕೇವಲ ಭಾಷಣದ ತಯಾರಿ ಮಾಡುವುದಲ್ಲ ಆದರೆ ಭಾಷೆಯಿಂದ ದೂರವಾದ ಸ್ಥಿತಿಗೆ ಹೋಗುವ ಅನುಭವ ಮಾಡಿಸುವಂತೆ ಭಾಷಣದ ತಯಾರಿ ಮಾಡಿ. ಭಾಷಣದ ತಯಾರಿ ಹೆಚ್ಚು ಮಾಡುತ್ತೀರಿ. ಆದರೆ ಆತ್ಮೀಕ ಆಕರ್ಷಣೆಯ

ಸ್ವರೂಪದ ಸ್ಮೃತಿಯಲ್ಲಿರುವ ತಯಾರಿಯ ಕಡೆಗೆ ಕಡಿಮೆ ಗಮನ ಕೊಡುತ್ತೀರಿ. ಆದ್ದರಿಂದ ಈ ಬಾರಿ ಹೆಚ್ಚು ಈ ಮಾತಿನ ತಯಾರಿ ಮಾಡಬೇಕು ಪ್ರತಿಯೊಬ್ಬರ ಹೃದಯದಲ್ಲಿ ತಂದೆಯ ಸಂಬಂಧದ ಸ್ನೇಹದ ಮುದ್ರೆ ಹಾಕಬೇಕು. ಒಳ್ಳೆಯದು.

ಮಧುಬನದವರು ಯಾವ ಸೇವೆ ಮಾಡುವರು? ಆ ದಿನ ಅವ್ಯಕ್ತ ವತನಕ್ಕೆ ಬರಲು ವಿಶೇಷ ನಿಮಂತ್ರಣವನ್ನು ಬಾಪ್ ದಾದಾ ಮಧುಬನದವರಿಗೆ ಕೊಡುವರು ವತನಕ್ಕೆ ಬಂದು ಎಲ್ಲಾ ಕಡೆಯ ಸೇವೆಯನ್ನು ನೋಡಬಹುದು. ಸಾಯಂಕಾಲ 7- 9ರ ವರೆಗೆ ವಿಶೇಷವಾಗಿ ಸುತ್ತಾಡಿಸುವರು. ಸಂದೇಶಿಯರನ್ನು ಸುತ್ತಾಡಿಸುವಂತೆ ಎಲ್ಲಾ ಸ್ಥಾನಗಳನ್ನು ತೋರಿಸುವರು. ಈ ರೀತಿ ಮಧುಬನದವರಿಗೆ ಕುಳಿತಲ್ಲಿಯೇ ಎಲ್ಲಾ ಸ್ಥಾನಗಳ ಸೇವೆಯನ್ನು ತೋರಿಸುವರು. ಪರಿಶ್ರಮವಿಲ್ಲದೆಯೇ ಎಲ್ಲಾ ಕಡೆಗೆ ಸುತ್ತಾಡುವಾಗ ಮತ್ತೇನು ಬೇಕು? ಆದ್ದರಿಂದ ಮಧುಬನದವರು ಆ ದಿನ ತಮ್ಮನ್ನು ಈ ಸ್ಥೂಲ ದೇಹದಿಂದ ದೂರ ಅವ್ಯಕ್ತ ವತನವಾಸಿಯೆಂದು ತಿಳಿದು ಕುಳಿತುಕೊಳ್ಳಿ. ಇಡೀ ದಿನದಲ್ಲಿ ಅನೇಕ ಅನುಭವ ಮಾಡುವಿರಿ. ಏನು ಅನುಭವ ಮಾಡಿದಿರಿ ಎಂದು ನಂತರ ಹೇಳಿ, ಆ ದಿನ ತಾವು ಸ್ವಲ್ಪ ಪುರುಷಾರ್ಥ ಮಾಡಿದರೂ ಸಹಜವಾಗಿ ಅಮೋಘವಾದ ಭಿನ್ನ ಭಿನ್ನ ಅನುಭವ ಮಾಡುವ ವರದಾನವನ್ನು ಪಡೆಯಬಹುದು ತಿಳಿಯಿತೇ? ಸಾಯಂಕಾಲ ಏಳರಿಂದ ಒಂಬತ್ತು ಗಂಟೆಯವರೆಗೆ ವಿಶೇಷ ನೆನಪಿನ ಕಾರ್ಯಕ್ರಮವನ್ನು ಇಟ್ಟುಕೊಳ್ಳಿ. ಇಡೀ ದಿನದ ನಿಮಂತ್ರಣವನ್ನು ಕೊಡುತ್ತಿದ್ದೇವೆ ಆದರೆ ವಿಶೇಷ ಇದು ಸುತ್ತಾಡುವ ಸಮಯವಾಗಿದೆ. ಈ ಸಮಯದಲ್ಲಿ ಪ್ರತಿಯೊಬ್ಬರೂ ಯಥಾಶಕ್ತಿ ಅನುಭವ ಮಾಡಬಹುದು. ಮಧುಬನದವರು ವಿಶೇಷ ಸ್ನೇಹಿಯಾಗಿದ್ದಾರೆ, ಆದ್ದರಿಂದ ವಿಶೇಷ ನಿಮಂತ್ರಣ ಕೇವಲ ಬುದ್ಧಿಯಿಂದ ತಮ್ಮ ಈ ದೇಹದ ಭಾವನೆಯಿಂದ ಬೇರೆಯಾಗಿ ಕುಳಿತುಕೊಳ್ಳಿ. ನಂತರ ಡ್ರಾಮಾದಲ್ಲಿ ಯಾವ ಅನುಭವ ಆಗಬೇಕೋ ಅದು ಆಗುತ್ತದೆ. ಸಂದೇಶಿಗಳಿಗೆ ಸಾಕ್ಷಾತ್ಕಾರ ಸಾಮಾನ್ಯ ಮಾತಾಗಿದೆ ಆದರ ಬುದ್ಧಿಯಿಂದಲೂ ಈ ಅನುಭವ ಮಾಡಬಹುದು. ಈ ಕಣ್ಣುಗಳಿಂದ ನೋಡಿದ ಅನುಭವದಷ್ಟು ಸ್ಪಷ್ಟವಾಗಿರುವುದು.

**ಶಿಕ್ಷಕಿಯರ ಜೊತೆಗೆ ವಾರ್ತಾಲಾಪ.**

ಈ ಗುಂಪಿಗೆ ಎಂತಹ ಗುಂಪು ಎಂದು ಹೇಳಬೇಕು? (ಭಾಷಣ ಮಾಡುವ ಗುಂಪು). ಸ್ಪೀಕರ್ಸ್ ಎಂದರೆ ಸ್ಪೀಚ್ (ಭಾಷಣ) ಮಾಡುವವರು, ಭಾಷಣದ (ಸ್ಪೀಚ್) ಜೊತೆಗೆ ತೀವ್ರಗತಿ (ಸ್ಪೀಡ್) ಇದೆಯಾ? ಏಕೆಂದರೆ ಭಾಷಣದ ಜೊತೆಗೆ ಪುರುಷಾರ್ಥದ ಗತಿಯೂ ತೀವ್ರವಾಗಿದ್ದರೆ ಅಂತಹವರ ಪ್ರಭಾವದಿಂದ ವಿಶ್ವದ ಕಲ್ಯಾಣವಾಗುತ್ತದೆ. ತೀವ್ರಗತಿಯಿಲ್ಲದ ಭಾಷಣವಿದ್ದರೆ ವಿಶ್ವದ ಕಲ್ಯಾಣವಾಗುವುದು ಕಷ್ಟಕರ, ಭಾಷಣ ಮತ್ತು ತೀವ್ರಗತಿಯಲ್ಲಿ ನಡೆಯುವ ಗುಂಪು (ಸ್ಪೀಚ್ -ಸ್ಪೀಡ್) ಎಂದು ಹೇಳಬಹುದು. ಭಾಷಣವೂ ಶಕ್ತಿಶಾಲಿ, ಗತಿಯೂ ಶಕ್ತಿಶಾಲಿಯಿರುವವರನ್ನು ವಿಶ್ವಕಲ್ಯಾಣಕಾರಿ, "ಮಾಸ್ಟರ್ ದುಃಖ-ಹರ್ತಾ ಸುಖ ಕರ್ತಾ" ಎಂದು ಕರೆಯುತ್ತಾರೆ. ಹಾಗಾದರೆ ಇಂತಹ ಕಾರ್ಯದಲ್ಲಿ ನಿರತರಾಗಿರುವಿರಾ? ದುಃಖ- ಹರ್ತಾ ಸುಖ-ಕರ್ತಾ ಆಗಿರುವವರು ಸ್ವಯಂ ಈ ಜಗತ್ತಿನ ಅಲೆಗಳಿಂದ ದೂರ ಹೋಗುವರು ಮತ್ತು ಅವರ ಭಾಷಣವೂ ದುಃಖದ ಅಲೆಗಳಿಂದ ದೂರ ಕರೆದುಕೊಂಡು ಹೋಗುವಂತಹುದು. ಇಂತಹ ಸ್ಟೇಟ್ ನಲ್ಲಿದ್ದು, ಸ್ಪೀಚ್ ಮಾಡುತ್ತೀರಾ? ಸ್ಪೀಚ್ ಸ್ಟೇಜ್ ಮೇಲೆ ಇದ್ದು ಮಾಡಲಾಗುತ್ತದೆ, ಹಾಗಾದರೆ ತಾವು ಯಾವ ಸ್ಟೇಜ್ ಮೇಲೆ ಇದ್ದು ಸ್ಪೀಚ್ ಮಾಡುತ್ತೀರಿ? ಹೊರಗಡೆಗೆ ಮಾಡಿದ ಸ್ಟೇಜ್ ಮೇಲೆ ಮಾಡುತ್ತೀರಾ? ಭಾಷಣ ಮಾಡುವವರು ಸ್ಥೂಲ ಸ್ಟೇಜ್ ಗೆ ಯಾವುದೇ ಸಮಯದಲ್ಲಿ ಹೋಗುವಾಗ ಮೊದಲು ತಮ್ಮ ಸ್ಥಿತಿಯ ಸ್ಟೇಜ್ ತಯಾರಿದೆಯಾ ಅಥವಾ ಇಲ್ಲವಾ ಎಂದು ಪರಿಶೀಲನೆ ಮಾಡುತ್ತಾರೆ. ಇಂತಹ ಸ್ಟೇಜ್ ನ ಮೇಲೆ ನಿಂತು ಭಾಷಣ ಮಾಡಿದಾಗ ಶ್ರೇಷ್ಠ ಸ್ಪೀಕರ್ ಎಂದು ಕರೆಯುತ್ತಾರೆ. ಸ್ತೂಲ ಸ್ಟೇಜ್ ತಯಾರು ಮಾಡಲು ಎಷ್ಟು ಸಮಯ ಮತ್ತು ಪರಿಶ್ರಮ ಬೇಕಾಗುತ್ತದೆಯೋ ಹಾಗೆಯೇ ತಮ್ಮ ಸ್ಥಿತಿಯ ಸ್ಟೇಜ್ ಸದಾ ತಯಾರಾಗಿರಲು ಅಷ್ಟೇ ಪುರುಷಾರ್ಥ ಮಾಡುತ್ತೀರಾ? ಇಂತಹ ಶಕ್ತಿಶಾಲಿ ಸ್ಟೇಜ್ ಮೇಲೆ ನಿಂತು ಸ್ಪೀಚ್ ಮಾಡುವವರ ಸ್ಮೃತಿಚಿಹ್ನೆ ಅಬುದಲ್ಲಿದೆ, ಅದು ಯಾವುದು? (ದಿಲವಾಡಾ), ಅದು ನೆನಪಿನ ಯಾತ್ರೆಯ ಸ್ಮೃತಿಚಿಹ್ನೆಯಾಗಿದೆ. ಗೋಮುಖವನ್ನು

ನೋಡಿಲ್ಲವೇ? ಅದು ಯಾರ ಸ್ಮೃತಿಚಿಹ್ನೆ ಆಗಿದೆ? ಇದು ಮುಖದ ಸ್ಮೃತಿಚಿಹ್ನೆ ಆಗಿದೆ. ಹೇಗೆ ತಂದೆಯ ಸ್ಮೃತಿಚಿಹ್ನೆ ಆಗಿದೆ ಗೋಮುಖ ಏಕೆಂದರೆ ಮುಖದಿಂದಲೇ ಎಲ್ಲವನ್ನೂ ಸ್ಪಷ್ಟ ಮಾಡುತ್ತಾರೆ. ಸ್ಪೀಕರ್ ಕೆಲಸವೂ ಮುಖದಿಂದಲೇ ಇದೆ. ಆದರೆ ಇಂತಹ ಶ್ರೇಷ್ಠ ಸ್ಥಿತಿಯಲ್ಲಿದ್ದು ಸ್ಪೀಚ್ ಮಾಡುವವರು. ಸದಾ ಸಿದ್ಧರಾಗಿರುವ ಸ್ಥಿತಿ, ಸಮಯಕ್ಕೆ ತಯಾರಿ ಮಾಡಿಕೊಳ್ಳುವ ಸ್ಟೇಜ್ ಅಲ್ಲ, ಸದಾಸಿದ್ಧ ಸ್ಟೇಜ್ ಆಗಿರುವುದರಿಂದ ಪ್ರಭಾವವಾಗುತ್ತದೆ. ಅದು ಬಹಳ ಚೆನ್ನಾಗಿ ಪ್ರಭಾವ ಬೀರುತ್ತದೆ. ಆದ್ದರಿಂದ ಪ್ರಭಾವಶಾಲಿ ಆಗಿದ್ದೀರಾ ಎಂದು ಕೇಳಿದೆವು? ಈ ಗುಂಪನ್ನು ಪ್ರಭಾವಶಾಲಿ ಗುಂಪು ಎಂದು ಹೇಳಬಹುದೇ? ಎಲ್ಲರೂ ಸರ್ಟಿಫಿಕೇಟ್ ಕೊಡುವರಾ? (ಒಳ್ಳೆಯ ಗುಂಪಾಗಿದೆ) ತಾವು ಸರ್ಟಿಫಿಕೇಟ್ ಕೊಟ್ಟರೆ ಇವರು ಎಲ್ಲರನ್ನೂ ಸಂತುಷ್ಟ ಮಾಡುವವರು ಆಗಬಹುದು. ಸಂತುಷ್ಟ ಮಣಿಯಾಗಿದ್ದೀರಲ್ಲವೇ? ಇದರಲ್ಲಿ "ಹೌದು" ಎಂದು ಹೇಳುತ್ತೀರಾ? ಸ್ವತಃ ತಾವು ಸಂತುಷ್ಟ ಮಣಿಯಾಗಿದ್ದರೆ ಅನ್ಯರನ್ನು ಸಂತುಷ್ಟ ಮಾಡುವಿರಿ. ಶಿಕ್ಷಕಿಯರ ಪರೀಕ್ಷೆಯೂ ಆಗುತ್ತದೆ, ಹೇಗೆ? (ಶಿಕ್ಷಕಿಯರ ಪ್ರಶ್ನೆ ಪತ್ರಿಕೆ ಸೂಕ್ಷ್ಮವತನದಿಂದ ಬರುತ್ತದೆ). ಹೆಜ್ಜೆ ಹೆಜ್ಜೆಗೂ ಶಿಕ್ಷಕಿಯರ ಪರೀಕ್ಷೆಯಾಗುತ್ತದೆ. ಯಾವುದೇ ಹೆಜ್ಜೆ ಇಡುವಾಗ ಪರೀಕ್ಷೆಯ ಹಾಲ್ ನಲ್ಲಿ ಕುಳಿತು ಹೆಜ್ಜೆ ಇಡುತ್ತಿದ್ದೇನೆ ಎಂದು ತಿಳಿಯಿರಿ ಏಕೆಂದರೆ ಸ್ಪೀಕರ್ ಅರ್ಥಾತ್ ಸ್ಟೇಜ್ ಮೇಲೆ ಕುಳಿತಿರುವವರು, ಸ್ಟೇಜ್ ಮೇಲೆ ಕುಳಿತಿರುವವರ ಕಡೆಗೆ ಎಲ್ಲರ ಗಮನವಿರುತ್ತದೆ. ತಾವೂ ಸಹ ಉನ್ನತ ಸ್ಟೇಜ್ ಮೇಲೆ ಕುಳಿತಿರುವಿರಿ. ಅನೇಕ ಆತ್ಮರ ದೃಷ್ಟಿ ತಮ್ಮ ಹೆಜ್ಜೆಯ ಮೇಲಿದೆ. ಆದ್ದರಿಂದ ತಾವು ಗಮನವಿಟ್ಟು ಹೆಜ್ಜೆಯನ್ನಿಡಬೇಕು. ಒಂದು ಹೆಜ್ಜೆ ಸಡಿಲವಾದರೆ ಅಥವಾ ಮೇಲೆ-ಕೆಳಗೆ ಆದರೆ ಅನೇಕರು ತಮ್ಮನ್ನು ಅನುಸರಿಸುತ್ತಾರೆ. ಆದ್ದರಿಂದ ಶಿಕ್ಷಕಿಯರು ಯಾವುದೇ ಹೆಜ್ಜೆಯನ್ನು ಇಡುವಾಗ ಯೋಚಿಸಿ ಇಡಬೇಕು. ಏಕೆಂದರೆ ಕಿರೀಟವನ್ನು ಧರಿಸಿದವರಲ್ಲವೇ? ಯಾವ ಕಿರೀಟ ಸಿಕ್ಕಿದೆ? ಜವಾಬ್ದಾರಿಯ ಕಿರೀಟ ಎಷ್ಟು ದೊಡ್ಡ ಜವಾಬ್ದಾರಿಯೋ ಅಷ್ಟು ದೊಡ್ಡ ಕಿರೀಟ. ಇಷ್ಟು ದೊಡ್ಡ ಜವಾಬ್ದಾರಿಯಿರುವಾಗ ಅಷ್ಟೇ ತಮ್ಮನ್ನು ನಿಮಿತ್ತರೆಂದು ತಿಳಿದು ಹೆಜ್ಜೆಯಿಡಿ. ಈಗ ಹುಡುಗಾಟಿಕೆ ಬೇಡ. ಕಿರೀಟ ಮತ್ತು ಸಿಂಹಾಸನಧಾರಿಯಾದ ಮೇಲೆ ಹುಡುಗಾಟಿಕೆ ಮುಗಿಯಿತು. ಹುಡುಗಾಟಿಕೆ ಎಂದರೆ ಪುರುಷಾರ್ಥದಲ್ಲಿ ಎಚ್ಚರಹೀನ. ಯಾವ ಹೆಜ್ಜೆ ಇಡುವೆವೋ ಅಥವಾ ಕರ್ಮವಾಗುತ್ತದೆಯೋ ಅದು ವಿಶ್ವಕ್ಕೆ ಒಂದು ಉದಾಹರಣೆಯಾಗಿರಬೇಕು ಎಂದು ಸದಾ ಈ ಗುಂಪು ತಿಳಿದುಕೊಳ್ಳಬೇಕು. ಏಕೆಂದರೆ ತಮ್ಮ ಈ ಕರ್ಮಗಳು ಕಥೆಗಳ ರೂಪದಲ್ಲಿ ಸ್ಮೃತಿಚಿಹ್ನೆ ಆಗುವವು. ತಮ್ಮ ಈ ಚರಿತ್ರೆ ಗಾಯನಾಯೋಗ್ಯವಾಗುವದು. ಇಷ್ಟು ಜವಾಬ್ದಾರಿ ಎಂದು ತಿಳಿದು ನಡೆಯುತ್ತೀರಾ? ಇದು ಈ ಜವಾಬ್ದಾರ ಗುಂಪಿನ ವಿಶೇಷತೆಯಾಗಿದೆ. ಯಾರು ಎಷ್ಟು ಜವಾಬ್ದಾರರೋ ಅಷ್ಟೇ ಹಗುರರಾಗಿರುವರು. ಒಳ್ಳೆಯದು.

ಅವ್ಯಕ್ತ ಮುರಳಿ 11-02-1971.

**ಅಂತಃವಾಹಕ ಶರೀರದ ಮೂಲಕ ಸೇವೆ.**

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಂತಃವಾಹಕ ಶರೀರದಿಂದ ಒಂದು ಸೆಕೆಂಡಿನಲ್ಲಿ ಎಷ್ಟು ದೂರವಾದರೂ ಹೋಗಬಲ್ಲೆನು.

2. ನಾನು ನನ್ನ ಶಕ್ತಿ ಸ್ವರೂಪದಿಂದ ಪ್ರತಿಯೊಬ್ಬರ ಹೃದಯದಲ್ಲಿ ಸರ್ವ ಶಕ್ತಿವಂತನನ್ನು (ಶಿವ ತಂದೆಯನ್ನು) ಪ್ರತ್ಯಕ್ಷ ಮಾಡಿದ್ದೇನೆ.

3. ನಾನು ಸಂಹಾರಿ ಮತ್ತು ಅಲಂಕಾರಿ  ಎರಡೂ ರೂಪಗಳಿಂದ ವೇದಿಕೆ ಮೇಲೆ ಬಂದು ಎಲ್ಲರಿಗೂ ಮಾರ್ಗದರ್ಶಿಯಾಗಿದ್ದೇನೆ.

4. ನಾನು ತಂದೆ ಎಂಬ ಶಬ್ದದಿಂದ ಎಲ್ಲರಲ್ಲಿ ಸ್ನೇಹ ಮತ್ತು ಶಕ್ತಿಯನ್ನು ತುಂಬಿ ಅನಾಥರನ್ನು ಸನಾಥರನ್ನಾಗಿ ಮಾಡಿದ್ದೇನೆ.

5. ನಾನು ಪ್ರತಿಯೊಂದು ಕರ್ಮವನ್ನು ಆಚರಿಸುವಾಗ ನನ್ನ ಸ್ಥಿತಿ ಒಂದು - ದಯಾ ಸ್ವರೂಪ, ಇನ್ನೊಂದು - ಕಲ್ಯಾಣಕಾರಿಭಾವನೆ, ಅತಿ ಸ್ನೇಹದ ಶಬ್ದ, ನನ್ನ ಸ್ವರೂಪದಲ್ಲಿ ಶಕ್ತಿಯ ಹೊಳಪು ಸದಾ ಇದೆ.

6. ನಾನು ಬಹಳ ಸಮಯದಿಂದ ಕೂಗುತ್ತಿರುವ ನನ್ನ ಭಕ್ತರಿಗೆ ನನ್ನ ಮುಖಾಂತರ ತಂದೆಯ ಸಾಕ್ಷಾತ್ಕಾರ ಮಾಡಿಸಲು ಬಂದಿದ್ದೇನೆ.

7. ನಾನು ಎಲ್ಲರನ್ನೂ ಆತ್ಮಿಕ ಆಕರ್ಷಣೆಯ ವೃತ್ತಿಯಲ್ಲಿ ಇರುವಂತೆ ತಯಾರು ಮಾಡಿ ಪ್ರತಿಯೊಬ್ಬರ ಹೃದಯದಲ್ಲಿ ತಂದೆಯ ಸಂಬಂಧದ ಸ್ನೇಹದ ಮುದ್ರೆಯನ್ನು ಹಾಕಿದ್ದೇನೆ.